# ವಚನ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆ

**ಅರುಂಧತಿ ಎಫ್. ಬದಾಮಿ**

ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ ಎಸ್.ವಿ.ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.15795561

## ABSTRACT:

ಪ್ರಸ್ತುತ ವಚನ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆ ಎಂಬ ಲೇಖನದಲ್ಲಿ ಪರಂಪರೆ ಮತ್ತು ಆಧುನಿಕತೆ ಎಂದರೇನು? ವಚನಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆಗಳು ಹೇಗೆ ಮುಖಾಮುಖಿಯಾಗುತ್ತವೆ? ಎಂಬುದನ್ನು ಚರ್ಚೆಗೊಳಪಡಿಸಲಾಗಿದೆ. ಶರಣರು ಸಂಪ್ರದಾಯ ಹೇಳಿದ ಪ್ರತಿ ವಿಚಾರಗಳನ್ನು ಮಾನವೀಯತೆ, ವೈಜ್ಞಾನಿಕ ತಳಹದಿಯ ಮೇಲೆ ಗಮನಿಸುತ್ತಾರೆ. ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿದ್ದ ಸಾಹಿತ್ಯ, ಮತ್ತು ಸಾಂಸ್ಕೃತಿಕ ಅಂಶಗಳು ಹನ್ನೆರಡನೇ ಶತಮಾನದಲ್ಲಿ ಏನೆಲ್ಲ ಬದಲಾವಣೆಗಳನ್ನು ಪಡೆದುಕೊಂಡವು, ಮತ್ತು ಅದಕ್ಕೆ ಕಾರಣಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಲೇಖನವನ್ನು ಎರಡು ದೃಷ್ಟಿಕೋನದಿಂದ ಅಧ್ಯಯನಕ್ಕೊಳಪಡಿಸಲಾಗಿದೆ. ಒಂದು ವಚನ ಸಾಹಿತ್ಯದ ಬಾಹ್ಯ ಸ್ವರೂಪ, ಇನ್ನೊಂದು ಅದರ ಆಂತರಿಕ ಸ್ವರೂಪ.

ವಚನವೆಂಬ ಪ್ರಕಾರವೇ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಮಾದರಿಯಾಗಿದೆ. ಇಲ್ಲಿ ಪರಂಪರಾಗತವಾಗಿ ಜನರೂಢಿಯಲ್ಲಿದ್ದ ಒಡಪು, ಒಗಟುಗಳು, ಗಾದೆ ಮಾತುಗಳನ್ನು ತಮ್ಮ ವಚನದಲ್ಲಿ ಸಹಜವೆಂಬಂತೆ ಬಳಕೆ ಮಾಡಿರುವುದನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಅಂಕಿತನಾಮದ ಬಳಕೆ ವಚನ ಸಾಹಿತ್ಯದ ನೂತನ ಪರಿಕಲ್ಪನೆಯಾಗಿರುವುದನ್ನು ಇಲ್ಲಿ ಗಮನಿಸಲಾಗಿದೆ. ಪರಂಪರಾಗತವಾಗಿ ಕೆಲವರಿಗಷ್ಟೇ ಮೀಸಲಾಗಿದ್ದ ಸಾಹಿತ್ಯ ರಚನೆ ವಚನ ಸಾಹಿತ್ಯದ ಸಂದರ್ಭದಲ್ಲಿ ಆ ಪರಂಪರೆಯನ್ನು ಮುರಿದು ಎಲ್ಲ ಜಾತಿ ವರ್ಗದ ಜನರೂ ಸಾಹಿತ್ಯ ರಚನೆಗೆ ತೊಡಗಿಕೊಂಡರು. ಶರಣರ ದೃಷ್ಟಿಯಲ್ಲಿ ಸ್ವರ್ಗ-ನರಕ, ಪುಣ್ಯ-ಪಾಪ-ಮೋಕ್ಷಗಳ ಪರಿಕಲ್ಪನೆಯೇ ಬೇರೆಯಾಗಿದೆ. ಕಾಯಕ ಮತ್ತು ದಾಸೋಹಗಳು ಶರಣರ ಬಹು ದೊಡ್ಡ ಹೊಸ ಪರಿಕಲ್ಪನೆಗಳು. ಕಾಯಕ ತತ್ವದ ಮೂಲಕ ಅಂದಿನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿರುವುದನ್ನು ಗಮನಿಸಬಹುದು. ಸ್ತ್ರೀಯರಿಗಂತೂ ವಚನಸಾಹಿತ್ಯದಲ್ಲಿ ಅತ್ಯುನ್ನತ ಸ್ಥಾನವನ್ನು ನೀಡಿದರು. ಆಧ್ಯಾತ್ಮಿಕತೆಯ ಸಾಧನೆಗೆ ಸ್ತ್ರೀಯರೇ ದೊಡ್ಡ ತೊಡಕು ಎಂದು ಪರಂಪರಾಗತವಾಗಿ ಬಂದ ಮಾತುಗಳನ್ನು ಶರಣರು ಅಲ್ಲಗಳೆಯುತ್ತಾರೆ. ಮತ್ತು ಎಲ್ಲದರಲ್ಲಿಯೂ ಸ್ತ್ರೀಯರಿಗೆ ಸಮಾನ ಸ್ಥಾನವನ್ನು, ಗೌರವವನ್ನೂ ನೀಡುತ್ತಾರೆ. ಹಾಗೆಯೇ ರಾಜಕೀಯ ಚಿಂತನೆಯಿಂದ ಗಮನಿಸಿದಾಗ ಸಾಮಾಜಿಕ ಸುಧಾರಣೆ ಶರಣಾಂಧೋಲನದ ಮುಖ್ಯ ಗುರಿಯಾದ್ದರಿಂದ ಸ್ವತಃ ಅರಸನೇ ಅಡ್ಡಿ ಬಂದರೂ

ಅವರು ಅಳುಕದೆ ಅರಸೊತ್ತಿಗೆಯನ್ನು ಹೇಗೆ ಎದುರಿಸಿದರು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಪರಂಪರೆ, ಆಧುನಿಕತೆ, ಸ್ತ್ರೀವಾದ, ಸಮತಾವಾದ, ಸಮಾಜವಾದ, ವ್ಯಕ್ತಿನಿಷ್ಠತೆ.

ಶತಮಾನಗಳಿಂದ ಸಮಾಜದಲ್ಲಿ ಬೇರೂರಿ ನಿಂತ ಅನೇಕ ಅವೈಜ್ಞಾನಿಕ ಅನಾಚಾರಗಳು, ರೂಢಿಗಳನ್ನು, ಪರಂಪರೆ, ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ತಮ್ಮ ವಚನಗಳ ಮುಖಾಂತರ ಧಿಕ್ಕರಿಸಿದವರು ಶರಣರು. ಈ ಮೂಲಕ ಹೊಸ ಸಮಾಜ ನಿರ್ಮಿತಿಯ ಕನಸನ್ನು ಕಂಡು ಅದನ್ನು ಸಾಕಾರಗೊಳಿಸಲು ಯತ್ನಿಸಿದರು. ಸಮಾಜ ಸುಧಾರಣೆಯಾಗಬೇಕೆಂದರೆ ಮೊದಲು ವ್ಯಕ್ತಿ ಬದಲಾಗಬೇಕು ಎಂದು ಪ್ರಬಲವಾಗಿ ನಂಬಿದ್ದ ವಚನಕಾರರ ವಚನಗಳಲ್ಲಿ ವ್ಯಕ್ತಿನಿಷ್ಠತೆ ಪ್ರಧಾನವಾಗಿ ಕಾಣುತ್ತದೆ. ಸಮಾಜದಲ್ಲಿನ ಎಲ್ಲ ಭೇದ–ಭಾವಗಳನ್ನೂ ಹೋಗಲಾಡಿಸಿ ಇವತ್ತು ಮುಂಚೂಣಿಯಲ್ಲಿ ಚರ್ಚೆಯಲ್ಲಿರುವ ಸ್ತ್ರೀವಾದ, ಸಮತಾವಾದ, ಸಮಾಜವಾದದ ಕುರಿತು ಸಮಾನತೆಯ ಹೆಸರಿನಲ್ಲಿ ಚರ್ಚಿಸಿದರು. ಭಾರತೀಯ ಸಮಾಜದಲ್ಲಿ ಪರಂಪರಾಗತವಾಗಿ ಬೆಳೆದುಕೊಂಡು ಬಂದ ಅನೇಕ ಆಚಾರ ವಿಚಾರಗಳನ್ನು ಪ್ರಶ್ನಿಸಿದರು. ಮೌಢ್ಯತೆಯನ್ನು ವಿರೋಧಿಸಿದರು. ಈ ರೀತಿಯಾಗಿ ವಚನ ಸಾಹಿತ್ಯ ಅನೇಕ ಆಚಾರ–ವಿಚಾರ, ಸಂಪ್ರದಾಯ, ಆಚರಣೆಗಳು ಪರಂಪರಾಗತವಾಗಿ ಬಂದರೂ ಅನಾರೋಗ್ಯಕರವಾಗಿದ್ದಲ್ಲಿ ಅವುಗಳನ್ನು ತಿರಸ್ಕರಿಸುತ್ತಾ ಆರೋಗ್ಯಕರವಾದ ಆಚಾರ–ವಿಚಾರಗಳನ್ನು ಮಾತ್ರ ಸ್ವೀಕರಿಸುತ್ತಾ ಬಂದಿತು. ಶರಣರು ತಮ್ಮ ಮನ ಒಪ್ಪದ ಯಾವ ಕೆಲಸವನ್ನೂ ಮಾಡಲಿಲ್ಲ. ಹೀಗಾಗಿ ಅನೇಕ ಸಲ ಇಲ್ಲಿ ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾಗಿ ನಿಲ್ಲುವುದನ್ನು ಕಾಣುತ್ತೇವೆ. ಸಂಪ್ರದಾಯ ಹೇಳಿದ ಪ್ರತಿ ವಿಚಾರಗಳನ್ನು ಮಾನವೀಯತೆ, ವೈಜ್ಞಾನಿಕ ತಳಹದಿಯ ಮೇಲೆ ಗಮನಿಸುತ್ತಾರೆ.

ಪರಂಪರೆ ಎನ್ನುವುದು ಸಂಪ್ರದಾಯವೆಂಬ ಅರ್ಥವನ್ನು ಕೊಟ್ಟರೆ ಆಧುನಿಕತೆಯೆಂಬುದು ನವೀನ ಎಂಬ ಅರ್ಥವನ್ನು ನೀಡುತ್ತದೆ. ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿದ್ದ ಸಾಹಿತ್ಯ, ಮತ್ತು ಸಾಂಸ್ಕೃತಿಕ ಅಂಶಗಳು ಹನ್ನೆರಡನೇ ಶತಮಾನದಲ್ಲಿ ಏನೆಲ್ಲ ಬದಲಾವಣೆಗಳನ್ನು ಪಡೆದುಕೊಂಡವು, ಮತ್ತು ಅದಕ್ಕೆ ಕಾರಣಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಈ ದೃಷ್ಟಿಯಿಂದ ಪ್ರಸ್ತುತ ಲೇಖನವನ್ನು ಎರಡು ದೃಷ್ಟಿಕೋನದಿಂದ ಅಧ್ಯಯನಕ್ಕೊಳಪಡಿಸಲಾಗಿದೆ. ಒಂದು

ವಚನ ಸಾಹಿತ್ಯದ ಬಾಹ್ಯ ಸ್ವರೂಪ, ಇನ್ನೊಂದು ಅದರ ಆಂತರಿಕ ಸ್ವರೂಪ.

ಹಾಡಿದರೆ ಹಾಡಾಗುವ ಓದಿದರೆ ಗದ್ಯವಾಗುವ ಈ ವಚನಗಳ ಸ್ವರೂಪವೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಒಂದು ನೂತನ ಮಾದರಿಯಾಗಿದೆ. ಗದ್ಯಪ್ರಕಾರ ಕನ್ನಡ ಸಾಹಿತ್ಯಕ್ಕೆ ಹೊಸದಲ್ಲ. ಆದರೆ ಚಂಪೂಕಾವ್ಯದಲ್ಲಿ ಪದ್ಯಗಳಿಗೆ ಪೂರಕವಾಗಿ ಗದ್ಯವು ಅಲ್ಲಲ್ಲಿ ಕಂಡುಬರುತ್ತಿತ್ತು. ಆದರೆ "ವಚನಕಾರರ ಗದ್ಯವಾದರೋ ಮುಕ್ತರೀತಿಯದು, ಸ್ವಸಂಪೂರ್ಣ ಸಮಗ್ರ ಸ್ವತಂತ್ರ ರೀತಿಯದು, ಭಾವನಿಷ್ಠತೆಯದು, ತೀವ್ರ ಪರಿಣಾಮಕಾರಿ ರೀತಿಯದು– ಇಷ್ಟಾದರೂ ಪುಟ್ಟದು ಅಚ್ಚುಕಟ್ಟಿನದು! ಇಂತಹ ಉಕ್ತಿ ವೈಖರಿಯನ್ನು ಅಂದಿಗೆ ನಾವು ಪದ್ಯದಲ್ಲಿ ಕಾಣಬಹುದಿತ್ತೇ ಹೊರತು, ಗದ್ಯದಲ್ಲಿ ಇಲ್ಲವೇ ಇಲ್ಲ. ವಚನಕಾರರು ಬರುವವರೆಗೆ ಇಡಿಯಾಗಿ ನಮ್ಮ ಸಾಹಿತ್ಯದಲ್ಲೇ ಭಾವನಿಷ್ಠತೆಯೆಂಬುದು ಪ್ರವೇಶಿಸಿರಲಿಲ್ಲ."[1] ಎಂಬುದೂ ಗಮನಾರ್ಹ. ಆದರೆ ಸಂಸ್ಕೃತ ಭಾಷೆ, ಛಂದಸ್ಸು, ಅಲಂಕಾರಗಳ ದಟ್ಟ ಪ್ರಭಾವದ ಜೊತೆಗೆ ಪುರಾಣಾಧಾರಿತವಾದ ಇಲ್ಲವೇ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳ ಕಥಾವಸ್ತುವನ್ನೇ ಆಧರಿಸಿ ಸಂಸ್ಕೃತಭೂಯಿಷ್ಠವಾದ, ಮಹಾಕಾವ್ಯಗಳನ್ನು ಈ ಮೊದಲು ರಚಿಸುತ್ತಿದ್ದುದು ನಮಗೆಲ್ಲ ಗೊತ್ತಿರುವ ವಿಷಯವೇ. ಆದರೆ ವಚನ ಸಾಹಿತ್ಯದಲ್ಲಿ ಸಣ್ಣ ಸಣ್ಣ ಬಿಡಿಬಿಡಿಯಾದ ವಿಷಯಗಳನ್ನೇ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ವಚನಗಳನ್ನು ರಚಿಸಿದ್ದಾರೆ. ಇದೊಂದು ಅಚ್ಚಗನ್ನಡ ದೇಸಿ ಸಾಹಿತ್ಯರೂಪವಾಗಿದೆ. ಅತಿಯಾದ ಸಂಸ್ಕೃತ ವ್ಯಾಮೋಹವನ್ನು ಅಲ್ಲಗಳೆದು ಜನರಾಡುವ ಸಾಮಾನ್ಯ ಭಾಷೆಯನ್ನು ವಚನ ಸಾಹಿತ್ಯದ ಭಾಷೆಯನ್ನಾಗಿಸಿಕೊಂಡರು. "ಕನ್ನಡದ ಪ್ರಾಚೀನ ಗದ್ಯಗ್ರಂಥಗಳಲ್ಲಿ ಜೈನಾಚಾರ್ಯರು ಶಿಷ್ಯರಿಗೆ ಬೋಧೆ ಮಾಡುವ ಸಂದರ್ಭ ಬಂದಾಗ–ಪರಂಪರೆಯಿಂದ ಬಂದ ಪ್ರಕೃತ–ಸಂಸ್ಕೃತ ಪದ್ಯಗಳನ್ನು 'ಓದಿ', ಅವುಗಳ ಅರ್ಥವನ್ನು 'ವಖ್ಖಾಣಿಸಿ'(ವ್ಯಾಖ್ಯಾನಿಸಿ) ಹೇಳಿದಂತೆ ಇದೆಯೇ ಹೊರತು; ಅವರು ತಮ್ಮ ಅನುಭಾವವನ್ನೇ ಪ್ರಧಾನವಾಗಿ ಮತ್ತು ನೇರವಾಗಿ ಕನ್ನಡ ಸೂಕ್ತಿಗಳಲ್ಲಿ ಗರ್ಭೀಕರಿಸಿ ಹೇಳುತ್ತಿರಲಿಲ್ಲ. ಶಿವಶರಣರೂ ತಮ್ಮ ಅನುಭಾವವನ್ನು ವಾಚಿಸುವಲ್ಲಿ ಅದಕ್ಕೆ ಆಧಾರವಾಗಿ ವೇದ–ಉಪನಿಷತ್–ಪುರಾಣಗಳಿಂದ ಸಂಸ್ಕೃತ ವಾಕ್ಯಗಳನ್ನು ಅಲ್ಲಲ್ಲಿ ಉಲ್ಲೇಖಿಸುತ್ತಿದ್ದುದೇನೋ ನಿಜ. ಆದರೆ ಅವರು ತಮ್ಮ ಸ್ವಂತ ಭಾವದ ಭಂಡಾರವನ್ನು ಕನ್ನಡ ನುಡಿಯ ತೇರಿನಲ್ಲಿ ತುಂಬಿ ಸಂಸ್ಕೃತೋಲ್ಲೇಖಗಳನ್ನು ಕೇವಲ ಕಡೆಗೀಲಾಗಿ ಬಳಸಿದರು. ಜೈನ ಸೈದ್ಧಾಂತಿಕರಾದರೋ, ತಮ್ಮ ಆತ್ಮೀಯಭಾವದ ಬಾಯನ್ನು ಭದ್ರವಾಗಿ ಮುದ್ರಿಸಿ ಪ್ರಕೃತ–ಸಂಸ್ಕೃತದ ಬಂಡಿಯಲ್ಲಿ ಆ ಪ್ರಾಚೀನದ ಗತಾನುಗತಿಕ ಉಕ್ತಿಗಳನ್ನು ಭರ್ತಿ ಮಾಡಿ, ಅದಕ್ಕೆ ತಮ್ಮ ಕನ್ನಡ ವ್ಯಾಖ್ಯಾನವನ್ನು ಕಡೆಗೀಲಾಗಿ ತುರುಕುತ್ತಿದ್ದರು."[2] ವಚನ ಎಂಬ ಪದವೇ ಮಾತು, ಭಾಷೆ ಎಂಬರ್ಥವನ್ನು ಗರ್ಭೀಕರಿಸಿಕೊಂಡಿದೆ. ಆಡುವ

ಮಾತು 'ಸೂತಕ'ವಾಗದಂತೆ ಪ್ರಕಟಗೊಂಡರೆ ಅದುವೇ ವಚನ. ಸೂತಕಕ್ಕೊಳಗಾದರೆ ಅದುವೇ ಮಾತು ಎಂಬುದು ಶರಣರ ಅಭಿಮತವಾಗಿದೆ."[3] ವಚನಕಾರರು ಸಾಮಾನ್ಯ ಮಾತುಗಳನ್ನೇ 'ಅನುಭಾವ'ದ ಎತ್ತರಕ್ಕೇರಿಸಿ ಆ 'ಅನುಭಾವ'ವನ್ನೇ ಆಚರಿಸುತ್ತ ಅದನ್ನೇ ಭಾಷಿಕ ಕ್ರಿಯೆಯಾಗಿಸಿಕೊಂಡಿದ್ದರಿಂದ ಅವು 'ವಚನ'ಗಳೆನ್ನಿಸಿಕೊಂಡಿವೆ. 'ಪಾತಾಳದಿಂದತ್ತತ್ತ ಮಾತು ಬಲ್ಲವರಿಲ್ಲ / ಗಗನದಿಂದ ಮಿಗಿಲಾದ ಅನುಭಾವ ತಾನಿಲ್ಲ' ಅಲ್ಲಮನ ಮೇಲಿನ ನುಡಿಯಲ್ಲಿ ಮಾತುಗಳನ್ನು ಶ್ರೇಣೀಕೃತವಾಗಿಸಿ ವ್ಯಾಖ್ಯಾನಿಸಿರುವುದು ಕಂಡುಬರುತ್ತದೆ. 'ಪಾತಾಳ-ಗಗನ' ಪಾತಾಳ ಕೆಳಸ್ತರದ ಸಂಕೇತ. ಗಗನ ಮೇಲುಸ್ತರದ ಸಂಕೇತ. ಕೆಳಪಾತಳಿಯಲ್ಲಿನ ಎಲ್ಲ ವ್ಯವಹಾರಕ್ಕೂ 'ಮಾತು' ಮಾಧ್ಯಮವಾದರೆ, ವ್ಯವಹಾರ ಬದುಕಿನ ನಿಲುಮೆಯನ್ನು ದಾಟಿ ಅಲೌಕಿಕಾನುಭವಗಳನ್ನು ಹೊರಹೊಮ್ಮಿಸಲು 'ವಚನ' ಸಾಧನವಾಗುತ್ತದೆಯೆಂಬುದು ಅಲ್ಲಮನ ಪರಿಭಾವನೆ."[4] ಈ ರೀತಿಯಾಗಿ ಶರಣರು "ಶಬ್ದ-ಸ್ಪರ್ಶ-ರೂಪು-ರಸ-ಗಂಧ ಈ ಪಂಚಜ್ಞಾನೇಂದ್ರಿಯಗಳಿಗೆ ಪಂಚ ಕರ್ಮೇಂದ್ರಿಯಗಳು ಪ್ರಮಾಣಗಳಾಗಿವೆ. ಇದರಲ್ಲಿ ಶಬ್ದಕ್ಕೆ ಶ್ರೋತೃ ಪ್ರಮಾಣವೆಂಬುದನ್ನು ವಚನಕಾರರು ಒಪ್ಪುತ್ತಾರೆ. ಇದನ್ನು ಆಧುನಿಕ ಸಮೂಹ ಸಂವಹನ ಮಾಧ್ಯಮ ತಜ್ಞರೂ ಸಹ ಅಂಗೀಕರಿಸುತ್ತಾರೆ."[5]

ಪರಂಪರಾಗತವಾಗಿ ಜನರೂಢಿಯಲ್ಲಿದ್ದ ಒಡಪು, ಒಗಟುಗಳು, ಗಾದೆ ಮಾತುಗಳನ್ನು ತಮ್ಮ ವಚನದಲ್ಲಿ ಸಹಜವೆಂಬಂತೆ ಬಳಕೆ ಮಾಡಿರುವುದನ್ನು ಕಾಣುತ್ತೇವೆ. ಅಂಕಿತನಾಮದ ಬಳಕೆ ವಚನ ಸಾಹಿತ್ಯದ ನೂತನ ಪರಿಕಲ್ಪನೆಯಾಗಿದೆ. ಕೆಲವರು ತಮ್ಮ ಆರಾಧ್ಯದೈವವನ್ನೋ, ಇನ್ನು ಕೆಲವು ವಚನಕಾರ್ತಿಯರು ತಮ್ಮ ಗಂಡಂದಿರ ಹೆಸರನ್ನೋ ಅಂಕಿತನಾಮವನ್ನಾಗಿ ಮಾಡಿಕೊಂಡಿದ್ದಾರೆ. ಶರಣರ ಗುರುತನ್ನು ಪ್ರಚುರಪಡಿಸುವ ಈ ಅಂಕಿತನಾಮಗಳು ವಚನ ಸಾಹಿತ್ಯದ ವೈಶಿಷ್ಟ್ಯವಾಗಿದೆ.

ವಚನ ಸಾಹಿತ್ಯದ ಆಂತರಿಕ ಸ್ವರೂಪವು ತನ್ನ ವಿಶೇಷತೆಯಿಂದ ಹೊಸ ಚಿಂತನೆಗಳಿಂದ ನಮ್ಮನ್ನು ಹೆಚ್ಚು ಆಕರ್ಷಿಸುತ್ತವೆ. ವಚನಗಳು ಯಾವುದೇ ಸಿದ್ಧ ಮಾದರಿಯನ್ನು ಅನುಸರಿಸಲಿಲ್ಲ. ಗಾತ್ರದಲ್ಲಿ ಅವು ಕಿರಿದಾದರೂ ಹಿರಿದಾದ ಅರ್ಥವನ್ನು ಒಳಗೊಂಡಿವೆ. ಜಾತಿ, ಅಂತಸ್ತುಗಳನ್ನು ಮೀರಿ ಎಲ್ಲರೂ ತಮ್ಮವರೇ ಎಂಬ ಹಿರಿದಾದ ಭಾವವನ್ನು ಹೊಂದಿದ್ದ ಶರಣರು ತಮ್ಮ ವಚನಗಳ ಮೂಲಕ ಅದನ್ನು ಪ್ರಚುರಪಡಿಸಿದರು.

**"ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ**
**ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದನಿಸಯ್ಯ**
**ಕೂಡಲಸಂಗಮದೇವಾ, ನಿಮ್ಮ ಮನೆಯಮಗನೆಂದಿನಿಸಯ್ಯ."**

ಎಂದು ಹೇಳಿದರು.

ಅರಮನೆಗೆ ಮಾತ್ರ ಮೀಸಲಾಗಿದ್ದ ಸಾಹಿತ್ಯ ವಚನಕಾರರ ಸಂದರ್ಭದಲ್ಲಿ ಜನಸಾಮಾನ್ಯರ ಹತ್ತಿರ ಬಂದಿತು. ಪರಂಪರಾಗತವಾಗಿ ಕೆಲವರಿಗಷ್ಟೇ ಮೀಸಲಾಗಿದ್ದ ಸಾಹಿತ್ಯ ರಚನೆ ವಚನ ಸಾಹಿತ್ಯದ ಸಂದರ್ಭದಲ್ಲಿ ಆ ಪರಂಪರೆಯನ್ನು ಮುರಿದು ಎಲ್ಲ ಜಾತಿ ವರ್ಗದ ಜನರೂ ಸಾಹಿತ್ಯ ರಚನೆಗೆ ತೊಡಗಿಕೊಂಡರು. ಉದಾಹರಣೆಗೆ ಆಯ್ದಕ್ಕಿ ಲಕ್ಕಮ್ಮ, ಜೇಡರ ದಾಸಿಮಯ್ಯ, ಸೂಳೆ ಸಂಕವ್ವೆ, ಚಕ್ಕೆಯ ಬೊಮ್ಮಣ್ಣ, ಕಿನ್ನರಿ ಬೊನ್ನಯ್ಯ, ಕಂಕರಿ ಕಕ್ಕಯ್ಯ, ಹಡಪದ ಅಪ್ಪಣ್ಣ, ಮಾದಾರ ಚನ್ನಯ್ಯ, ಮುಂತಾದವರು ವಚನ ರಚನೆಯಲ್ಲಿ ತೊಡಗಿಕೊಂಡರು.

ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಅನೇಕ ಸಾಧು–ಸಂತರು, ಮಹಾಂತರು ಆಗಿ ಹೋಗಿದ್ದಾರೆ. ಅವರೆಲ್ಲರ ಸಿದ್ಧಿ ಸಾಧನೆಯ ಪರಮ ಗುರಿ ಮೋಕ್ಷಗಳಿಸುವುದಾಗಿತ್ತು. ಆದರೆ ಶರಣರ ದೃಷ್ಟಿಯಲ್ಲಿ ಸ್ವರ್ಗ–ನರಕ, ಪುಣ್ಯ–ಪಾಪ–ಮೋಕ್ಷಗಳ ಪರಿಕಲ್ಪನೆಯೇ ಬೇರೆಯಾಗಿದೆ. ಇಹ ಪರವನ್ನು ಐಕ್ಯಗೊಳಿಸಿದ ಶರಣರು 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ವೆಂದು ಸಾರಿದರು. "ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ" 'ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ','ಆಚಾರವೇ ಸ್ವರ್ಗ, ಅನಾಚಾರವೇ ನರಕ' ವೆಂದು ಹೇಳಿ ನಾವಿರುವ ಜಾಗವನ್ನು ಸ್ವರ್ಗ, ನರಕವನ್ನಾಗಿಸಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ ಎಂದು ಎಚ್ಚರಿಸಿದರು.

ವಿಜ್ಞಾನವಿನ್ನೂ ಕತ್ತಲೆಯಲ್ಲಿ ತೆವಳುತ್ತಿರುವಾಗಲೇ ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ವೈಚಾರಿಕ ಕ್ರಾಂತಿ ನಡೆದದ್ದು ಸೋಜಿಗದ ಸಂಗತಿ. ಬಸವಣ್ಣನವರು ಹುಟ್ಟಿದಾಗ ಅಸ್ಪೃಶ್ಯತಾ ದೋಷದಿಂದ, ಜಾತಿರೋಗದಿಂದ, ಕುತ್ಸಿತ ದೇವತೆಗಳ ಪೂಜೆಯಿಂದ, ಪುರೋಹಿತರ ಶೋಷಣೆಯಿಂದ ರಾಜರ ಅಂತಃಕಲಹಗಳಿಂದ ಛಿದ್ರ ವಿಛಿದ್ರವಾಗಿದ್ದ ಸಮಾಜ ಅಪಾಯದ ಅಂಚಿನಲ್ಲಿತ್ತು. ಹೊಸಧರ್ಮ ಸ್ಥಾಪನೆಗೆ, ನವಸಮಾಜ ನಿರ್ಮಾಣಕ್ಕೆ ಪೂರ್ವಭಾವಿಯಾಗಿ ಹಳತರ ನಿರ್ಮೂಲನ ಅನಿವಾರ್ಯವೆಂದು ತಿಳಿದ ವಚನಕಾರರೆಲ್ಲರೂ ಏಕಪ್ರಕಾರವಾಗಿ ಹಿಂದಿನ ಪುರೋಹಿತಶಾಹಿಯ ಆಕ್ಟೋಪಸ್ ಪಂಥ ಹಾಗೂ ಅದನ್ನು ಕುರಿತ ಗ್ರಂಥಗಳ ಮೇಲೆ ಧಾಳಿ ನಡೆಸುತ್ತಾರೆ."[6] ಪರಂಪರಾಗತವಾಗಿ ನಮ್ಮ ಸಮಾಜದಲ್ಲಿ ಬೇರೂರಿದ್ದ ಜಾತಿವ್ಯವಸ್ಥೆಯನ್ನು ಖಂಡಿಸಿದ ಶರಣರು 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ / ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ/ ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ?/ಇದು ಕಾರಣ ಕೂಡಲಸಂಗಮದೇವಾ/ ಲಿಂಗಸ್ಥಲವನರಿದ' ನೆಂದು ವರ್ಣವ್ಯವಸ್ಥೆಯನ್ನು ಸಂಪೂರ್ಣವಾಗಿ ವಿರೋಧಿಸಿದರು.

ಒಂದು ಸಮಾಜ ಸುಲಲಿತವಾಗಿ ಸಾಗಲು ಹಂಚಿಕೊಂಡಿದ್ದ ವೃತ್ತಿಗಳೇ ಜಾತಿಗಳಾಗಿ ಕಾಡತೊಡಗಿ ಅಮಾನವೀಯತೆಗೆ ಸಾಗಿದಾಗ ಶರಣರು ಜಾತಿಗಳು ಸಮಾಜದಲ್ಲಿ ಬೆಳೆದು ಬಂದ ಬಗೆ, ಅವು ತಮ್ಮ ಮೂಲ ಉದ್ದೇಶಗಳನ್ನು ಮರೆತು ಕಾಲಾಂತರದಲ್ಲಿ ಅವುಗಳ ಸ್ವರೂಪ ಹೇಗೆ ಬದಲಾದವು ಎಂಬುದನ್ನು ಬಯಲು ಮಾಡಿ ಈಗಲಾದರೂ ಆ ಜಾತಿ ಸಂಕೋಲೆಯಿಂದ ಹೊರಬರಲು ಸೂಚಿಸಿದರು. ಮೇಲ್ಜಾತಿ ಕೆಳಜಾತಿ ಎನಲಾರದೆ ಶರಣೆರೆಲ್ಲ ಒಂದೇ ಜಾತಿಯೆಂದು ಸಾರಿದರು. ಈ ಕಾರಣಕ್ಕಾಗಿಯೇ ಸಮಾಜದಲ್ಲಿ ನಿಷಿದ್ಧವಾಗಿದ್ದ ಅಂತರಜಾತಿಯ ವಿವಾಹವನ್ನು ಪುರಸ್ಕರಿಸಿದರು.

ಜಾತಿಯ ಕಾರಣದಿಂದಾಗಿಯೇ ಎಲ್ಲ ಅವಕಾಶಗಳಿಂದ ವಂಚಿತರಾದ ಕೆಳಜಾತಿಯ ಜನರಿಗೆ ದೇವಾಲಯಗಳು ನಿಷಿದ್ಧವಾಗಿದ್ದವು. ಅವರಿಗೆಲ್ಲ 'ಶಿವ' ನೆಂಬ ಏಕದೇವತೋಪಾಸನೆಯ ತತ್ವವನ್ನು ಸಾರಿದರು. ದೇಹವನ್ನೇ ದೇಗುಲವೆಂದು ಸಾರುವುದರ ಮೂಲಕ ದೇಗುಲ ಪ್ರವೇಶ ನಿಷಿದ್ಧವಿದ್ದ ಕೆಳಜಾತಿಯವರಿಗೂ, ಬಡತನದ ಕಾರಣದಿಂದಾಗಿ ದೇವಾಲಯ ನಿರ್ಮಾಣದಂತಹ ಪುಣ್ಯದ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಕೀಳರಿಮೆಯ ಪ್ರಜ್ಞೆಯನ್ನು ಹೊಂದಿದವರಿಗೆ "ಉಳ್ಳವರು ಶಿವಾಲಯವ ಮಾಡುವರು! ನಾನೇನ ಮಾಡಲಿ? ಬಡವನಯ್ಯ! ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯ! ಕೂಡಲಸಂಗಮದೇವ ಕೇಳಯ್ಯ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂದು ಹೇಳುವುದರ ಮೂಲಕ ದೇವರ ಸಾನಿಧ್ಯದಲ್ಲಿ ಸಕಲರೂ ಸಮಾನರು ಎಂಬ ಭಾವವನ್ನು ತಿಳಿಹೇಳಿದರು. ವಚನಕಾರರ ವಚನಗಳಲ್ಲಿ ಜಾತಿ ನಿವಾರಣೆಯ ಧೋರಣೆ ಕಂಡುಬರುತ್ತದೆ. "ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡನಾದಡೆ ನಿಮ್ಮಾಣೆ! ನಿಮ್ಮ ಪುರಾತನರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ!' ದೇವಸಹಿತ ಅಂದರೆ ಅಂಗದ ಮೇಲೆ ಲಿಂಗಧಾರಿಯಾಗಿ ಮನೆಗೆ ಬಂದ ಅತಿಥಿಗಳನ್ನು ಅವರ ಕಾಯಕವನ್ನು ಕೇಳುವುದರ ಮೂಲಕ ಅವರ ಜಾತಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ ಎಂದು ಹೇಳುತ್ತಾರೆ. ಯಾವ ಕಾಯಕವನ್ನು ಮಾಡಿದರೂ ಸೈ ಮನೆಗೆ ಬಂದ ಅತಿಥಿಗಳು ದೈವೀಸ್ವರೂಪಿಗಳು ಎನ್ನುವ ಅವರ ಭಾವವೇ ಸಮಾಜದಲ್ಲಿ ಸಮಾನತೆಯ ತತ್ವವನ್ನು ಸಾರಿ ಹೇಳುತ್ತದೆ.

**ಏನು ಬಂದಿರಿ, ಹದುಳವಿದ್ದಿರೇ? ಎಂದರೆ**
**ನಿಮ್ಮ ಮೈಸಿರಿ ಹಾರಿ ಹೋಹುದೇ?**
**"ಕುಳ್ಳಿರೆಂ"ದರೆ ನೆಲ ಕುಳಿಹೋಹುದೆ?**
**ಒಡನೆ ನುಡಿದರೆ ಸಿರ–ಹೊಟ್ಟೆಯೊಡೆವುದೆ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ**
**ಕೆಡಹಿ ಮೂಗ ಕೊಯ್ಯದೆ**

**ಮಾಣ್ಬನೆ ಕೂಡಲಸಂಗಮದೇವನು?**

ಸಮಾಜದಲ್ಲಿರುವ ಎಲ್ಲ ವೃತ್ತಿಗಳ ಗೌರವವೂ ಒಂದೇ. ಮನುಷ್ಯನಾದವನು ಯಾವುದಾದರೊಂದು ಕಾಯಕದೊಂದಿಗೆ ಜೀವನ ಸಾಗಿಸುತ್ತಾ, ತಾನು ಸತ್ಯ-ಶುದ್ಧ ಕಾಯಕದಿಂದ ಸಂಪಾದಿಸಿದ ಧನದಲ್ಲಿ ದಾನ-ಧರ್ಮ ಮತ್ತು ಗುರು-ಲಿಂಗ-ಜಂಗಮಗಳ ತ್ರಿವಿಧ ದಾಸೋಹ ಮಾಡಬೇಕೆಂದು ಬೋಧಿಸಿ, ತಾವೂ ಅದರಂತೆ ನಡೆದರು. ಇದರಿಂದ ಸಮಾಜದಲ್ಲಿ ಎಲ್ಲರೂ ಸಮಾನ ಸ್ಥಾನ-ಮಾನಗಳಿಂದ, ಸಮಾನ ಅಂತಸ್ತಿನಿಂದ ಬದುಕುವಂತಾಯಿತು.....ಹೀಗೆ ತಮ್ಮ ಆದರ್ಶ ಸಮಾಜವಾದ ಅನೇಕ ತತ್ವಗಳಿಂದ ಎಲ್ಲ ಜಾತಿ-ಮತ-ಪಂಥಗಳನ್ನು ಮೇಲು-ಕೀಳೆಂಬ ಭಾವವನ್ನು ಕಿತ್ತು, ಸಮಸ್ತ ಸಮಾಜವನ್ನು ಎರಡೇ ವರ್ಗಗಳನ್ನಾಗಿ ನಿರ್ಮಿಸಿದರು. ಅವೇ ಒಂದು 'ಭಕ್ತ' ವರ್ಗ, ಇನ್ನೊಂದು 'ಭವಿ' ವರ್ಗ.''[7]

ಕಾಯಕ ಮತ್ತು ದಾಸೋಹಗಳು ಶರಣರ ಬಹು ದೊಡ್ಡ ಹೊಸ ಪರಿಕಲ್ಪನೆಗಳು. 'ಕಾಯಕವೇ ಕೈಲಾಸ'ವೆಂದು ಸಾರಿದ ಶರಣರು ''ಕಾಯಕದಲ್ಲಿ ನಿರತನಾದಡೆ, / ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು,/ ಜಂಗಮ/ ಮುಂದೆ ನಿಂದಿದ್ದರೂ ಹಂಗ ಹರಿಯಬೇಕು. ಕಾಯಕವೇ ಕೈಲಾಸವಾದ ಕಾರ ಣ/ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು'' ಎಂದು ಆಯ್ದಕ್ಕಿ ಮಾರಯ್ಯನವರು ಕಾಯಕದಲ್ಲಿ ನಿರತನಾದವನು ಗುರು-ಲಿಂಗ-ಜಂಗಮ ಬಂದರೂ ಅವರ ಸೇವೆಯ ಕುರಿತು ಚಿಂತಿಸದೆ ತನ್ನ ಕಾಯಕವನ್ನು ಮುಂದುವರೆಸಬೇಕೆಂದು ಹೇಳುತ್ತಾರೆ. ಹನ್ನೆರಡನೆಯ ಶತಮಾನದ ಸ್ತ್ರೀಯರಲ್ಲಿಯೂ ಅನೇಕರು ಸ್ವತಂತ್ರ ಕಾಯಕವನ್ನು ಮಾಡುತ್ತಿದ್ದರು. ಅವರೆಲ್ಲರಿಗೂ ಕಾಯಕದಲ್ಲಿ ಅಪಾರ ನಂಬಿಕೆ, ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆಯಿತ್ತು ಎಂಬುದನ್ನು ಅವರ ವಚನಗಳು ಸಾರಿ ಹೇಳುತ್ತವೆ. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸತ್ಯಶುದ್ಧವಾದ ಕಾಯಕವನ್ನು ಮಾಡಲೇಬೇಕೆಂದು ಸಾರಿದ ಬಸವಣ್ಣನವರು ಕಾಯಕದ ಜೊತೆಗೆ ದಾಸೋಹವೂ ಪ್ರತಿಯೊಬ್ಬರ ಕರ್ತವ್ಯವೆಂಬುದನ್ನು ಮನವರಿಕೆ ಮಾಡಿದರು. ಶರಣರಿಗೂ ಸತ್ಯ ಶುದ್ಧ ಕಾಯಕದ ಬಗ್ಗೆ ಮನವರಿಕೆ ಮಾಡುತ್ತಾರೆ.

ಸ್ತ್ರೀಯರಿಗಂತೂ ವಚನಸಾಹಿತ್ಯದಲ್ಲಿ ಅತ್ಯುನ್ನತ ಸ್ಥಾನವನ್ನು ನೀಡಿದರು. ಸ್ತ್ರೀಯರಿಗೆ ಸಮಾನತೆಯ ಸ್ಥಾನವನ್ನು ನೀಡಿದಾಗ ಮಾತ್ರ ಒಂದು ಸಮಾಜ ಪರಿಪೂರ್ಣತೆಯ ಸ್ಥಾನವನ್ನು ಪಡೆಯುತ್ತದೆ. ದೇವರ ದಾಸಿಮಯ್ಯ 'ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ' ಎಂದು ಹೇಳಿದರೆ ಸಿದ್ಧರಾಮ

**'ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು**
**ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿತ್ತು**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನ್ನೇರಿತ್ತು**

**ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು**
**ಅದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ**
**ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿನಾಥ ನೋಡಾ'**

ಎಂದು ಹೇಳುತ್ತಾನೆ. ಹೀಗೆ ಸಿದ್ಧರಾಮನು ಸ್ತ್ರೀಯರಿಗೆ ಎಷ್ಟು ಸಾಧ್ಯವೋ ಅಷ್ಟು ಉನ್ನತ ಸ್ಥಾನವನ್ನು ತನ್ನ ವಚನಗಳ ಮೂಲಕ ನೀಡಿದ್ದಾನೆ.

**'ಹೊನ್ನು ಮಾಯೆ ಎಂಬರು / ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆ ಎಂಬರು / ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆ ಎಂಬರು /ಮಣ್ಣು ಮಾಯೆಯಲ್ಲ.**
**ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ'**

ಎಂದು ಅಲ್ಲಮಪ್ರಭು ಹೇಳುತ್ತಾನೆ.

ಆಧ್ಯಾತ್ಮಿಕತೆಯ ಸಾಧನೆಗೆ ಸ್ತ್ರೀಯರೇ ದೊಡ್ಡ ತೊಡಕು ಎಂದು ಪರಂಪರಾಗತವಾಗಿ ಬಂದ ಮಾತುಗಳನ್ನು ಶರಣರು ಅಲ್ಲಗಳೆಯುತ್ತಾರೆ. ಮಾತ್ರವಲ್ಲ ಹೆಣ್ಣು ಮಾಯೆಯೆಂಬುದನ್ನು ಅವರು ಒಪ್ಪುವುದೂ ಇಲ್ಲ. ಆಸೆಯೆಂಬುದು ವಸ್ತುವಿನಲ್ಲಿ ಇಲ್ಲ. ಬಯಸುವವರ ಮನದಲ್ಲಿದೆಯೆಂಬುದನ್ನು ಸ್ಪಷ್ಟಪಡಿಸುತ್ತಾರೆ. ಅನೇಕ ವಚನಕಾರ್ತಿಯರ ಅಸ್ಮಿತೆಯನ್ನು ಅವರ ವಚನಗಳಲ್ಲಿ ಗಮನಿಸಬಹುದು. ಇಂಥ ವಚನಕಾರ್ತಿಯರನ್ನು ನೆನೆದಾಗ ನಮಗೆ ಮೊದಲಿಗೆ ನೆನಪಾಗುವುದೇ ಅಕ್ಕಮಹಾದೇವಿ. "ಆಕೆ ವಿಚಾರಸ್ವಾತಂತ್ರ್ಯದ ಮಹಿಳೆ. ಗಂಡ ಮತ್ತು ವಿಚಾರಸ್ವಾತಂತ್ರ್ಯ– ಈ ಎರಡು ಆಯ್ಕೆಗಳು ಆಹ್ವಾನವಾದಾಗ ಗಂಡನನ್ನು ಧಿಕ್ಕರಿಸಿ ವಿಚಾರಸ್ವಾತಂತ್ರ್ಯವನ್ನು ಆಯ್ದುಕೊಂಡುದು ಲೋಕದ ಇತಿಹಾಸದಲ್ಲಿಯೇ ಅಪರೂಪದ ಘಟನೆಯಾಗಿದೆ"[8] ಕೌಶಿಕ ಅರಸನನ್ನು ಧಿಕ್ಕರಿಸಿ ಬಂದ ಅಕ್ಕ ಮುಂದೆ ಹಲವಾರು ಕಠಿಣ ಪ್ರಶ್ನೆಗಳಿಗೆ ಉತ್ತರವನ್ನೀಡಬೇಕಾಗುತ್ತದೆ. ಹಲವು ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬಂದಾಗ ಅಕ್ಕನ ವಚನಗಳಲ್ಲಿ ಇದನ್ನು ಕಾಣುತ್ತೇವೆ. 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಂತಯ್ಯ' ಎಂದೂ ಎಲ್ಲವನ್ನೂ ಪರಿತ್ಯಜಿಸಿ ಹೊರಟಾಗ ಈ ಪುರುಷ ಪ್ರಧಾನ ಸಮಾಜದಲ್ಲಿ ಆಕೆಗೆ ಮುಂದಿನ ಬದುಕು ಹೇಗೆ ಎಂಬ ಪ್ರಶ್ನೆ, ಚಿಂತೆ ಕಾಡಿದಾಗ ಅಕ್ಕ

'ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು /ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು / ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು / ಚೆನ್ನಮಲ್ಲಿಕಾರ್ಜುನಯ್ಯಾ, ಆತ್ಮಸಂಗಾತಕ್ಕೆ ನೀನೆನಗುಂಟು.' ಎಂದು ಹೇಳುವಲ್ಲಿ ಅಕ್ಕನ ಧೈರ್ಯ, ಆತ್ಮವಿಶ್ವಾಸ ಮೆಚ್ಚುವಂತದ್ದು. ಈ ರೀತಿಯಾಗಿ ಅಕ್ಕನ ಜೊತೆಗೆ ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಸೂಳೆ ಸಂಕವ್ವೆ, ಸತ್ಯಕ್ಕ ಮುಂತಾದ ವಚನಕಾರ್ತಿಯರು ಆಯ್ಕೆಯ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರೂಢಿಸಿಕೊಂಡು ಗಟ್ಟಿಗಿತ್ತಿಯರಾಗಿ

ನಿಲ್ಲುವಲ್ಲಿ ಬಸವಣ್ಣನವರ ಪಾತ್ರ ಹಿರಿದು.

ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯವನ್ನು ನಾವು ವೈದಿಕ ಸಂಸ್ಕೃತಿಯಲ್ಲಿ ಬಿಟ್ಟರೆ ಮತ್ತೆ ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಕಾಣುತ್ತೇವೆ. ಇಲ್ಲಿಯ ಸ್ತ್ರೀಯರು ಉಪನಿಷತ್ಕಾಲದ ಸ್ತ್ರೀಯರಿಗಿಂತಲೂ ಜಾಗ್ರತರು, ಪ್ರತಿಭಾವಂತರು, ಕವಯಿತ್ರಿಯರು, ಧೈರ್ಯಶಾಲಿಗಳು ಆಗಿ ಅವರಿಗಿಂತಲೂ ಒಂದು ಹೆಜ್ಜೆ ಮುನ್ನಡೆದಿದ್ದಾರೆ. ಅಲ್ಲದೆ ಅವರಿಗೆ ಅಂದಿನ ಶಿವಶರಣರ ಸಮಾಜವೂ ಪರಿಪೂರ್ಣ ಸ್ವತಂತ್ರತೆಯನ್ನು ಕಲ್ಪಿಸಿಕೊಟ್ಟಿತ್ತು”[9]

ರಾಜಕೀಯ ಸಂದರ್ಭದಲ್ಲಿ ವಚನ ಸಾಹಿತ್ಯ ಮತ್ತು ಪರಂಪರೆಯನ್ನು ಅವಲೋಕಿಸಿದಾಗಲೂ ಅನೇಕ ಒಪ್ಪಿಗೆಗಳ ಜೊತೆಗೆ ಸಂಘರ್ಷವನ್ನು ಕಾಣುತ್ತೇವೆ. ಋಗ್ವೇದದ ಸಂದರ್ಭದಲ್ಲಿ ‘ರಾಜಾ ಪ್ರತ್ಯಕ್ಷ ದೇವತಾ’ ಎಂದು ರಾಜನನ್ನು ದೇವರ ಸ್ಥಾನದಲ್ಲಿಟ್ಟಿದ್ದರು. ಕೆಲವು ಅರಸರು ಆತ್ಮಜ್ಞಾನಿಗಳಾಗಿ ಪ್ರಜೆಗಳನ್ನು ಮಕ್ಕಳ ರೀತಿ ಪರಿಪಾಲನೆ ಮಾಡಿದರೆ ಇನ್ನೂ ಕೆಲವರು ನಿರಂಕುಶಪ್ರಭುತ್ವ ಉಳ್ಳವರಾಗಿ ಅಧಿಕಾರಮದದಿಂದ ಅಹಂಕಾರಿಗಳಾಗಿದ್ದರು. ರಾಜರ ಇಂತಹ ನಡವಳಿಕೆ ಮಾನವತಾವಾದಿಗಳೂ, ವಿಚಾರವಾದಿಗಳೂ ಆದ ಶರಣರಿಗೆ ಸರಿ ಕಾಣಲಿಲ್ಲ. ಸಾಮಾಜಿಕ ಸುಧಾರಣೆ ಶರಣಾಂದೋಲನದ ಮುಖ್ಯ ಗುರಿಯಾದ್ದರಿಂದ ಸ್ವತಃ ಅರಸನೇ ಅಡ್ಡಿ ಬಂದರೂ ಅವರು ಅಳುಕಲಿಲ್ಲ. ಸ್ವತಃ ಬಸವಣ್ಣ, ಚನ್ನಬಸವಣ್ಣ, ಸೊಡ್ಡಳ ಬಾಚರಸ, ಬೊಕ್ಕಸದ ಚಿಕ್ಕಣ್ಣ ಮುಂತಾದವರು ರಾಜನ ಆಸ್ಥಾನದಲ್ಲಿ ನಾನಾ ಹುದ್ದೆಗಳನ್ನು ಅಲಂಕರಿಸಿದ್ದರೂ ಸಹ ಸಂದರ್ಭ ಬಂದಾಗ ‘ಜೋಳವಾಲಿಯವ ನಾನಲ್ಲ, ವೇಳೆವಾಳಿಯವ ನಾನಯ್ಯ, ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ, ಕೇಳು ಕೂಡಲಸಂಗಮದೇವಾ, ಮರಣವೆ ಮಹಾನವಮಿ’ ಎಂದು “ಬಸವಾದಿ ಶರಣರು ರಾಜನಿಗೆ ‘ಜೋಳವಾಳಿ’ಯಾಗಿ ಮಾತ್ರ ಇದ್ದು, ತಮ್ಮ ಸಾಮಾಜಿಕ ಕ್ರಾಂತಿಗೆ ‘ವೇಳೆವಾಳಿ’ಯಾಗಿದ್ದರು.”[10]

ಒಟ್ಟಿನಲ್ಲಿ ವಚನಗಳು ಕನ್ನಡದ ಉಪನಿಷತ್ತುಗಳು. ಈ ವಚನಗಳ ಮುಖಾಂತರ ಸಮಾನತೆಯ ನವಸಮಾಜದ ನಿರ್ಮಾಣಕ್ಕೆ ಮುನ್ನುಡಿ ಬರೆದರು. ಪರಂಪರಾಗತವಾಗಿ ರೂಢಿಯಿಂದ ಬಂದು ಜಿಡ್ಡುಗಟ್ಟಿದ ಅನಾರೋಗ್ಯಕರವಾದ ಮೌಢ್ಯತೆಗಳನ್ನು ಕಿತ್ತೆಸೆದರು. ಸಾಮಾಜಿಕ ಸುಧಾರಣೆಗೆ ಅವಶ್ಯಕತೆಯಿದ್ದಲ್ಲಿ ಪರಂಪರೆಯ ಜೊತೆಗೆ ಆಧುನಿಕತೆಯನ್ನೂ ಮೈಗೂಡಿಸಿಕೊಂಡರು. ಈ ರೀತಿಯಾಗಿ ಕೆಲವೊಮ್ಮೆ ಪರಂಪರೆಯನ್ನು ಸ್ವೀಕರಿಸಿಯೋ ಕೆಲವೊಮ್ಮೆ ನಿರಾಕರಿಸಿಯೋ ಹೊಸ ಹೊಸ ಪರಿಕಲ್ಪನೆಗಳನ್ನು, ತತ್ವಗಳನ್ನು, ಸಿದ್ಧಾಂತಗಳನ್ನು ಜಾರಿಯಲ್ಲಿ ತಂದರು. ಮೌಢ್ಯತೆಗಳನ್ನು ಕಿತ್ತೊಗೆದರು. 12ನೇ ಶತಮಾನದ ವಚನಗಳು ಸರ್ವಕಾಲಕ್ಕೂ

ಪ್ರಸ್ತುತವಾಗಿವೆ. ಹೀಗಾಗಿ ಈ ವಚನಗಳು ಇಂದಿಗೂ ಜನಮಾನಸದಲ್ಲಿ ಬೆರಗಿನಿಂದ ಬೇರುಬಿಟ್ಟು ನಿಂತಿವೆ.

**ಕೊನೆ ಟಿಪ್ಪಣಿಗಳು:**

1. ಬಸವರಾಜು ಎಲ್., (2017), ಅಲ್ಲಮನ ವಚನಗಳು, ಸಪ್ನ ಬುಕ್ ಹೌಸ್, ಬೆಂಗಳೂರು, ಪು.ಸಂ. 17
2. ಅದೇ, ಪು.ಸಂ. 18
3. ಶಿವಾನಂದ ವಿ., (2003), ವಚನ ಸಾಹಿತ್ಯದಲ್ಲಿ ಸಮಾಜೋ–ಭಾಷಿಕ ಚಿಂತನೆಗಳು, ಶ್ರೀಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.ಸಂ. 11
4. ಅದೇ, ಪು.ಸಂ. 10
5. ಅದೇ, ಪು.ಸಂ. 10
6. ಅದೇ, ಪು.ಸಂ. 69
7. ಶಿವಕುಮಾರ ಶೀವಾಚಾರ್ಯ ಮಹಾಸ್ವಾಮಿಗಳು, (2004), ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ, ಲಿಂಗಾಯತ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ, ಪು.ಸಂ. 400
8. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪು.ಸಂ. 14
9. ಶಿವಕುಮಾರ ಶೀವಾಚಾರ್ಯ ಮಹಾಸ್ವಾಮಿಗಳು, (2004), ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ, ಲಿಂಗಾಯತ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ, ಪು.ಸಂ. 381
10. ಅದೇ, ಪು.ಸಂ. 420

## ಪರಾಮರ್ಶನ ಗ್ರಂಥಗಳು:


1. ಬಸವರಾಜು ಎಲ್., (2017), ಅಲ್ಲಮನ ವಚನಗಳು, ಸಪ್ನ ಬುಕ್ ಹೌಸ್, ಬೆಂಗಳೂರು.
2. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
3. ಶಿವಾನಂದ ವಿ., (2003), ವಚನ ಸಾಹಿತ್ಯದಲ್ಲಿ ಸಮಾಜೋ-ಭಾಷಿಕ ಚಿಂತನೆಗಳು, ಶ್ರೀಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಶಿವಕುಮಾರ ಶೀವಾಚಾರ್ಯ ಮಹಾಸ್ವಾಮಿಗಳು, (2004), ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ, ಲಿಂಗಾಯತ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.